<u>Government of Karnataka</u>

<u>Deposition Sheet Form No. R.P. 57</u>

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 732/2019

ಪಿ.ಡಬ್ಲ್ಯೂ-01

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಶರಣಬಸಪ್ಪ ಪಾಟೀಲ |
| ತಂದೆಯ ಹೆಸರು | ಃ- | ಶ್ರೀಮಂತರಾವ್ ಪಾಟೀಲ |
| ವಯಸ್ಸು | ಃ- | 44 ವರ್ಷ |
| ಉದ್ಯೋಗ | ಃ- | ಅಬಕಾರಿ ಉಪನಿರೀಕ್ಷಕರು ಲಿಂಗಸುಗೂರು ವಲಯ |
| ವಾಸಸ್ಥಳ | ಃ- | ಲಿಂಗಸುಗೂರು |

ದಿ.08-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

***<u>ಮುಖ್ಯ ವಿಚಾರಣೆ: ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-</u>***

ನಾನು ನವೆಂಬರ್-2025 ರಿಂದ ಇಲ್ಲಿಯವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಲಿಂಗಸುಗೂರು ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ ಆರೋಪಿಯಾದ ಆಮಣ್ಣ ತಂದೆ ಲಾಲಪ್ಪ ರವರ ಮೇಲೆ ನ್ಯಾಯಾಲಯ ಹೊರಡಿಸಿದ ಉದ್ಘೋಷಣಾ ವಾರೆಂಟನ್ನು ಪಡೆದುಕೊಂಡು ನಾನು ದಿನಾಂಕ 07-02-2026 ರಂದು ಸಂಜೆ 4-30 ರ ಸಮಯದಲ್ಲಿ ಆಶಿಹಾಳ ತಾಂಡದ ಬಸ್ ನಿಲ್ದಾಣದ ಹತ್ತಿರ ಹೋಗಿ ಇಬ್ಬರು ಪಂಚರನ್ನು ಬರಮಾಡಿಕೊಂಡು ಸ್ಥಳದಲ್ಲಿ ಆರೋಪಿತನ ಕುರಿತು ವಿಚಾರಣೆ ಮಾಡಲಾಗಿ ಅವರ ಕುರಿತು ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಆರೋಪಿತನ ಕುರಿತು ಯಾವುದೇ ಮಾಹಿತಿ ದೊರೆಯದ ಕಾರಣ ಸ್ಥಳೀಯ ಪಂಚರಾದ ನವರಾಜಕುಮಾರ ತಂದೆ ರಾಮಣ್ಣ ಮತ್ತು ರಾಜು ತಂದೆ ಧನಜಪ್ಪರವರನ್ನು ಬರಮಾಡಿಕೊಂಡು ಬಸ್ ನಿಲ್ದಾಣದ ಹತ್ತಿರ ಮತ್ತು ಆರೋಗ್ಯ ಕೇಂದ್ರ ಹಾಗೂ ಗ್ರಾಮ ಪಂಚಾಯತಿ ಹತ್ತಿರ ಪಂಚನಾಮೆ ಮಾಡಿ ಉದ್ಘೋಷಣಾ ವಾರೆಂಟಿನ ಪ್ರತಿಯನ್ನು ಗೋಡೆಗೆ ಅಂಟಿಸಿ ಫೋಟೋ ತೆಗೆಯಿಸಲಾಯಿತು. ನಂತರ ಸಾರ್ವಜನಿಕ ಸ್ಥಳಗಳಲ್ಲಿ ಅಂದರೆ ಬಸ ನಿಲ್ದಾಣದ ಮುಂದೆ ಮತ್ತು ಆರೋಗ್ಯ ಕೇಂದ್ರ ಮತ್ತು ಗ್ರಾಮ ಪಂಚಾಯತಿಯ ಗೋಡೆಗೆ ಉದ್ಘೋಷಣಾ ವಾರೆಂಟಿನ ಪ್ರತಿಯನ್ನು ಅಂಟಿಸಿ ಫೋಟೋ ತೆಗೆಯಿಸಲಾಯಿತು. ಆ ಕುರಿತು ಸದರಿ ಸ್ಥಳದಲ್ಲಿ ಸಂಜೆ 5-00 ರಿಂದ 5-45 ವರೆಗೆ ಪಂಚನಾಮೆಯನ್ನು ಮಾಡಿ ಫೋಟೋಗಳನ್ನು ತೆಗೆದುಕೊಂಡು ಆ ಕುರಿತು ನ್ಯಾಯಾಲಯಕ್ಕೆ ವರದಿಯನ್ನು ಮಾಡಿರುತ್ತೇನೆ.

2. ಸಾಕ್ಷಿ ಉದ್ಘೋಷಣಾ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1 ಎಂದು, ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಸಿ-2(ಎ) ಎಂದು, ಎರಡು ಭಾವ ಚಿತ್ರಗಳನ್ನು ನಿ.ಪಿ-3 ರಿಂದ 6 ಎಂದು ಗುರುತಿಸಲಾಯಿತು.

3. ಆರೋಪಿಯ ಆಸ್ತಿಗಳ ಕುರಿತು ಪಿಡಿಓ ಖೈರವಾಡಗಿ ಗ್ರಾಮ ಪಂಚಾಯತಿ ರವರಿಗೆ ಪತ್ರ ಬರೆದಿದ್ದು ಆರೋಪಿತನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಕಂಡು ಬರದ ಕುರಿತು ಸಂಬಂಧಪಟ್ಟ ಪಂಚಾಯತಿಯಿಂದ ವರದಿಯನ್ನು ಪಡೆದುಕೊಂಡು ಬಂದಿರುತ್ತೇನೆ. ಫಾರ್ಮ್ ನಂ.7 ಅನ್ನು ನಿ.ಪಿ-7 ಎಂದು, ಸಾಕ್ಷಿ ಸದರಿ ಅರ್ಜಿ ಮತ್ತು ವರದಿಯನ್ನು ನೋಡಿ ಅವುಗಳನ್ನು ನಿ.ಪಿ-8 ಮತ್ತು 9 ಎಂದು ಗುರುತಿಸಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.